56

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ ಎ ಶರವಣ ಇವರು ನಿಯಮ 330ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಭಾರತದ ಅತಿ ಪ್ರಸಿದ್ಧ ಹಾಗೂ ಹೆಚ್ಚಿನ ಜನ ಸಂದಣಿ ಇರುವ ದೇವಾಲಯಗಳಲ್ಲಿ ತಿರುಪತಿ ತಿಮ್ಮಪ್ಪನ ದೇವಾಲಯವು ಒಂದು. ಪ್ರತಿ ನಿತ್ಯ ಇಲ್ಲಿಗೆ ಕರ್ನಾಟಕದಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ತಿಮ್ಮಪ್ಪನ ದರ್ಶನ ಪಡೆಯಲು ಹೋಗುತ್ತಾರೆ. ರಾಜ್ಯದಿಂದ ತೆರಳುವ ಭಕ್ತರಿಗೆ ಅಲ್ಲಿ ತಂಗಲು ಸರ್ಕಾರದ ವತಿಯಿಂದ ನಿರ್ಮಿಸಿರುವ ಅತಿಥಿಗೃಹದ ನಿರ್ವಹಣೆ ಸರಿಯಾಗಿಲ್ಲ ಮತ್ತು ಕೊಠಡಿಗಳ ಮುಂಗಡ ಕಾಯ್ದಿರಿಸುವಿಕೆಯಲ್ಲಿ ಸಹ ಅನೇಕ ಲೋಪದೋಷಗಳಿವೆ. ಪ್ರಸ್ತುತ, ಆನ್‌ಲೈನ್‌ನಲ್ಲಿಯೇ ಹೆಚ್ಚಿನ ಕೊಠಡಿಗಳನ್ನು ಕಾಯ್ದಿರಿಸಲಾಗುತ್ತಿದೆ. ಇದರಿಂದ, ನೇರವಾಗಿ ಹೋಗುವ ಭಕ್ತರಿಗೆ ಮತ್ತು ಶಾಸಕರ ಶಿಫಾರಸ್ಸು ಪತ್ರದೊಂದಿಗೆ ಹೋಗುವ ಭಕ್ತರಿಗೆ ಕೊಠಡಿಗಳು ಲಭ್ಯವಾಗುತ್ತಿಲ್ಲ. ಆದುದರಿಂದ, ನೇರವಾಗಿ ಹೋಗುವ ಭಕ್ತರಿಗೆ ಆಫ್‌ಲೈನ್‌ನಲ್ಲಿ ಸಹ ಹೆಚ್ಚು ಕೊಠಡಿಗಳು ಸಿಗುವಂತಾಗಬೇಕು. ಹಾಗೆಯೇ, ಸದರಿ ಅತಿಥಿ ಗೃಹದಲ್ಲಿ ಅನ್ನ ಸಂತರ್ಪಣೆ ವ್ಯವಸ್ಥೆ ಇಲ್ಲದಿರುವುದರಿಂದ ಅಲ್ಲಿ ತಂಗುವ ಭಕ್ತರಿಗೆ ತೊಂದರೆಯಾಗುತ್ತಿದೆ. ಅತಿಥಿ ಗೃಹಕ್ಕೆ ಬರುವ ಆದಾಯದಲ್ಲಿ ನಿರ್ವಹಣೆ ಜೊತೆ ಊಟದ ವ್ಯವಸ್ಥೆ ಕಲ್ಪಿಸಿದರೆ ಅಲ್ಲಿ ತಂಗುವ ಭಕ್ತರಿಗೆ ತುಂಬಾ ಅನುಕೂಲವಾಗುತ್ತದೆ. ಮುಂದುವರೆದು, ತೆಲಂಗಾಣ ಶಾಸಕರಿಗೆ ತಿರುಪತಿಯಲ್ಲಿ ಶ್ರೀ ವೆಂಕಟೇಶ್ವರನ ದರ್ಶನ ಪಡೆಯಲು ವಾರದಲ್ಲಿ ಮೂರು ದಿನ ಶಿಫಾರಸ್ಸು ಪತ್ರ ನೀಡಲು ಅವಕಾಶ ನೀಡಲಾಗಿದೆ. ಅದೇ ಮಾದರಿಯಲ್ಲಿ ಕರ್ನಾಟಕದ ಶಾಸಕರಿಗೂ ವಾರದಲ್ಲಿ ಮೂರು ದಿನ ಶಿಫಾರಸು ಪತ್ರದ ಆಧಾರದ ಮೇಲೆ ದೇವರ ದರ್ಶನಕ್ಕೆ ಅವಕಾಶ ನೀಡಲು ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಶ್ರೀ ಚಂದ್ರಬಾಬು ನಾಯ್ಡುರವರನ್ನು ಭೇಟಿ ಮಾಡಿ ಒತ್ತಾಯ ಮಾಡಲು ರಾಜ್ಯ ಸರ್ಕಾರದ ವತಿಯಿಂದ ಶಾಸಕರ ನಿಯೋಗವನ್ನು ರಚಿಸಿ ಆಂಧ್ರಪ್ರದೇಶಕ್ಕೆ ತೆರಳಿ ಆಂಧ್ರ ಸರ್ಕಾರಕ್ಕೆ ಮನವಿ ಮಾಡುವ ಕುರಿತು ನಿಯಮ 330ರ ಅಡಿಯಲ್ಲಿ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಗಮನ ಸೆಳೆದಿರುತ್ತಾರೆ.**

**ಉತ್ತರ:-**

ಆಂಧ್ರಪ್ರದೇಶದ ಶ್ರೀ ಕ್ಷೇತ್ರ ತಿರುಮಲದಲ್ಲಿರುವ ಶ್ರೀ ವೆಂಕಟೇಶ್ವರಸ್ವಾಮಿ ದೇವಸ್ಥಾನವು ಆಂಧ್ರಪ್ರದೇಶ ಸರ್ಕಾರದ ತಿರುಮಲ -ತಿರುಪತಿ ದೇವಾಲಯದ (TTD) ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಸದರಿ ದೇವಾಲಯವು ಕರ್ನಾಟಕ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಯ ಆಡಳಿತ ವ್ಯಾಪ್ತಿಗೆ ಬರುವುದಿಲ್ಲ.

ಶ್ರೀ ಕ್ಷೇತ್ರ ತಿರುಮಲದಲ್ಲಿರುವ ಕರ್ನಾಟಕ ರಾಜ್ಯ ಛತ್ರವು ಕರ್ನಾಟಕ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಯ ಆಡಳಿತ ನಿರ್ವಹಣೆಯಲ್ಲಿರುತ್ತದೆ. ಕರ್ನಾಟಕ ರಾಜ್ಯ ಛತ್ರದ ದೈನಂದಿನ ಆಡಳಿತ ನಿರ್ವಹಣೆ ಹಾಗೂ ಮೇಲ್ವಿಚಾರಣೆಯನ್ನು ಕರ್ನಾಟಕ ಸರ್ಕಾರದಿಂದ ನಿಯೋಜನೆಗೊಂಡಿರುವ ಛತ್ರದ ವಿಶೇಷಾಧಿಕಾರಿಗಳು ನಿರ್ವಹಿಸುತ್ತಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 07 ಮುಲಿಕಾ 2020 ದಿನಾಂಕ:30.06.2020ರನ್ವಯ ಆಂಧ್ರಪ್ರದೇಶ, ತಿರುಮಲದ ಕರ್ನಾಟಕ ರಾಜ್ಯ ಛತ್ರದ ಜಾಗದಲ್ಲಿ ನಿರ್ಮಾಣ ಮಾಡಲಾಗಿರುವ ವಸತಿಗೃಹಗಳ ವಿವರ ಈ ಕೆಳಕಂಡಂತಿದೆ:-

| ಕ್ರ ಸಂ | ಕಟ್ಟಡಗಳ ವಿವರ | ಕೊಠಡಿಗಳ ವಿವರ | ಷರಾ |
|---|---|---|---|
| 1 | ಹಳೇಬೀಡು (ಕೆಪಿಎಸ್) | 82 ಕೊಠಡಿಗಳು | ಕರ್ನಾಟಕ ಪ್ರವಾಸಿ ಸೌಧ ಕಟ್ಟಡವನ್ನು ಪ್ರಸ್ತುತ ಸಮಗ್ರ ಅಭಿವೃದ್ಧಿ ಯೋಜನೆಯ ಕಾಮಗಾರಿಗಳಲ್ಲಿ ನವೀಕರಿಸಲಾಗಿರುತ್ತದೆ. |
| 2 | ಹಂಪಿ ಬ್ಲಾಕ್ | 110 A/C ಕೊಠಡಿಗಳು | - |
| 3 | ಐಹೊಳೆ ಬ್ಲಾಕ್ | 132 Non – Ac ಕೊಠಡಿಗಳು (12ಡಾರ್ಮೆಟರಿ ಒಳಗೊಂಡಿರುತ್ತದೆ) | - |
| 4 | ಶ್ರೀ ಕೃಷ್ಣ ರಾಜೇಂದ್ರ ಒಡೆಯರ್ ಕಲ್ಯಾಣ ಮಂಟಪ | ಕಲ್ಯಾಣ ಮಂಟಪದ ಹಾಲ್‌ನಲ್ಲಿ 500 ಮತ್ತು ಡೈನಿಂಗ್ ಹಾಲ್‌ನಲ್ಲಿ 500 ಆಸನಗಳ ಸಾಮರ್ಥ್ಯವಿರುತ್ತದೆ. | - |

ಹಳೇಬೀಡು, ಹಂಪಿ ಮತ್ತು ಐಹೊಳೆ ಬ್ಲಾಕ್ ಕಟ್ಟಡ ಹಾಗೂ ಕೊಠಡಿಗಳ ಸ್ವಚ್ಛತಾ ನಿರ್ವಹಣೆಯನ್ನು (House Keeping) ಇ-ಟೆಂಡರ್ ಮೂಲಕ M/s Xeon Systems, Bengaluru ಸಂಸ್ಥೆಯವರಿಗೆ ವಹಿಸಲಾಗಿರುತ್ತದೆ. ಸದರಿ ಸಂಸ್ಥೆಯವರು ಸರಿಯಾಗಿ ಸ್ವಚ್ಛತಾ ನಿರ್ಹಣೆಯನ್ನು ನಿರ್ವಹಿಸುತ್ತಿದ್ದಾರೆ.

ಸದರಿ ಕೊಠಡಿಗಳನ್ನು ಯಾತ್ರಾರ್ಥಿಗಳು ಮುಂಗಡವಾಗಿ ಆನ್‌ಲೈನ್‌ನಲ್ಲಿ **karnatakatemplesaccommodation.com** website ಮೂಲಕ ಕಾಯ್ದಿರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದ್ದು ವಿವರ ಕೆಳಕಂಡಂತಿರುತ್ತದೆ.

ತಿರುಮಲದ ಕರ್ನಾಟಕ ರಾಜ್ಯ ಛತ್ರದ ಐಹೊಳೆ ಬ್ಲಾಕ್‌ನಲ್ಲಿರುವ 132 ಕೊಠಡಿಗಳ ಪೈಕಿ 90 ಕೊಠಡಿಗಳನ್ನು ಮತ್ತು ಹಂಪಿ ಬ್ಲಾಕ್‌ನಲ್ಲಿ ಲಭ್ಯವಿರುವ ಒಟ್ಟು 110 ಕೊಠಡಿಗಳಲ್ಲಿ 71 AC ಕೊಠಡಿಗಳ ಪೈಕಿ 50 AC ಕೊಠಡಿಗಳನ್ನು ಮತ್ತು 39 AC Suits ಕೊಠಡಿಗಳ ಪೈಕಿ 15 AC Suits ಕೊಠಡಿಗಳನ್ನು ಭಕ್ತಾದಿಗಳಿಗೆ ಮುಂಗಡವಾಗಿ **60% Online** ಹಾಗೂ **40% Offline** ಮೂಲಕ ಕಾಯ್ದಿರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.

ಉಳಿದಂತೆ, ಕೊಠಡಿಗಳನ್ನು ಸನ್ಮಾನ್ಯ ಮುಖ್ಯಮಂತ್ರಿಗಳ/ ಸಚಿವರುಗಳ/ ಶಾಸಕರುಗಳ ಮತ್ತು ಇತರೆ ಉನ್ನತ ಮಟ್ಟದ ಅಧಿಕಾರಿಗಳ ಕಛೇರಿಗಳಿಂದ ನೀಡುವ ಶಿಫಾರಸ್ಸು ಪತ್ರಗಳಿಗೆ ಆದ್ಯತೆಯನ್ನು ನೀಡಿ, ಕೊಠಡಿಗಳ ಲಭ್ಯತೆಗನುಗುಣವಾಗಿ ಹಂಚಿಕೆ ಮಾಡಲಾಗುತ್ತಿರುತ್ತದೆ. ಪಾರದರ್ಶಕತೆಯನ್ನು ಕಾಯ್ದುಕೊಳ್ಳುವ ಸಲುವಾಗಿ ಹಾಗೂ ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿನ ಯಾತ್ರಾರ್ಥಿಗಳಿಗೆ/ ಭಕ್ತಾದಿಗಳಿಗೆ ಕೊಠಡಿಗಳನ್ನು ಕಾಯ್ದಿರಿಸಿಕೊಳ್ಳಲು ಅನುಕೂಲವಾಗುವ ನಿಟ್ಟಿನಲ್ಲಿ ಅಧಿಕ ಸಂಖ್ಯೆಯಲ್ಲಿ ಕೊಠಡಿಗಳನ್ನು ಆನ್‌ಲೈನ್ ಮೂಲಕ ಕಾಯ್ದಿರಿಸಿಕೊಳ್ಳಲು ಭಕ್ತಾದಿಗಳಿಗೆ ಅನುಕೂಲ ಕಲ್ಪಿಸಲಾಗಿರುತ್ತದೆ.

ಆಂಧ್ರಪ್ರದೇಶ ತಿರುಮಲ ಕ್ಷೇತ್ರಕ್ಕೆ ಆಗಮಿಸುವ ಎಲ್ಲಾ ರಾಜ್ಯಗಳ ಭಕ್ತಾದಿಗಳಿಗೆ/ ಯಾತ್ರಾರ್ಥಿಗಳಿಗಾಗಿ ತಿರುಮಲ-ತಿರುಪತಿ ದೇವಾಲಯದ ಪ್ರಾಧಿಕಾರದವರು ಅನ್ನದಾಸೋಹ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಪ್ರತ್ಯೇಕವಾಗಿ ಕರ್ನಾಟಕ ರಾಜ್ಯ ಛತ್ರದಲ್ಲಿ ಅನ್ನ ದಾಸೋಹ ನಡೆಸಲು ಟಿಟಿಡಿ ಪ್ರಾಧಿಕಾರದ ಅನುಮತಿ ಅಗತ್ಯವಿರುತ್ತದೆ.

ಕರ್ನಾಟಕ ರಾಜ್ಯದ ಮಾನ್ಯ ಶಾಸಕರುಗಳು ಈ ಹಿಂದೆ ತಿರುಮಲದ ಶ್ರೀ ವೆಂಕಟೇಶ್ವರ ಸ್ವಾಮಿಯವರ ದರ್ಶನಾರ್ಥ ಭೇಟಿ ನೀಡಿದಾಗ ಶಾಸಕರು ಒಳಗೊಂಡು ಅವರ ಕುಟುಂಬದ 06 ಮಂದಿಗೆ ಸೀಮಿತಗೊಳಿಸಿ VIP ಬ್ರೇಕ್ ದರ್ಶನ ಟಿಕೆಟ್‌ಗಳನ್ನು ಮಂಜೂರು ಮಾಡುತ್ತಿರುವುದು ಕಂಡುಬರುತ್ತದೆ.

ಸದರಿ VIP ಬ್ರೇಕ್ ದರ್ಶನದ ಟಿಕೆಟ್‌ಗಳ ಮಂಜೂರಾತಿ ವಿಷಯವು ಮತ್ತು ಮಾನ್ಯ ಕರ್ನಾಟಕ ರಾಜ್ಯದ ಶಾಸಕರುಗಳಿಗೆ ಈ ಹಿಂದೆ ಇದ್ದಂತೆ VIP ಬ್ರೇಕ್ ದರ್ಶನದ ಟಿಕೆಟ್ ಮಂಜೂರು ಮಾಡುವ ವಿಚಾರವು ಆಂಧ್ರಪ್ರದೇಶ ಸರ್ಕಾರದ ಆಡಳಿತ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಸಂಖ್ಯೆ: ಕಂಇ 190 ಮುಸಪ್ರ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು